**27-10-41 ರಾತ್ರಿ 8.55**

ತಾ|| 22ರಿಂದ ಹಲ್ಲುನೋವು ಮತ್ತೆ ಹೆಚ್ಚಿತು. ಜ್ವರವೂ ಬರತೊಡಗಿತು. 25ನೆಯ ತಾ||ನ ದಿವಸ ಸ್ವಲ್ಪ ಗುಣ. ಅಂದು ಹಾನಗಲ್ಲ ಇಂಗ್ಲಿಶ ಶಾಲೆಯ ವಾರ್ಷಿಕೋತ್ಸವಕ್ಕೆ ಆಮಂತ್ರಿತನಾಗಿ ಹೋಗಿ ಇಂದು ಸಂಜೆಗೆ ತಿರುಗಿ ಬಂದೆನು. 26ನೆಯ ಸಂಜೆಯ ಸಮಯದಲ್ಲಿ ಅಲ್ಲಿ ಸಭೆ. ನಾನು ಮುಖ್ಯ ಅತಿಥಿ. ಭಾಷಣವು ಪರಿಣಾಮಕಾರಿಯಾಯ್ತು. ಇಂದು ಮುಂಜಾನೆ 4-5 ಪದ್ಯಗಳನ್ನು ಶಾಲೆಯಲ್ಲಿ ಕೂಡಿದ ಜನರ ಮುಂದೆ ಹಾಡಿದೆನು. ಜನರು ಮೆಚ್ಚಿದರು. ಹಾನಗಲ್ಲ ಮಾಸ್ತರರ ಮನೆಯವರು ಉತ್ಕೃಷ್ಟ ಬಗೆಯ ಆತಿಥ್ಯದಿಂದ ನನ್ನನ್ನು ಸನ್ಮಾನಿಸಿದರು. ಸಜ್ಜನರು, ಗುಣಿಗಳು, ಗುಣಗ್ರಾಹಕರು.

ನನ್ನ ಫೌಂಟನ್ ಪೆನ್ ಕಾಣದಂತಾಗಿದೆ. ಬಹುದಿವಸದ ಪೆನ್. ಶ್ರೀರಾಮಚರಿತವನ್ನೂ ಅನೇಕ ಕವನಗಳನ್ನೂ ಬರೆದ ಪೆನ್! ಇಂದು ದೊರೆಯದಾಗಿದೆ! ಮನಸ್ಸಿಗೆ ವ್ಯಥೆ! Ever Sharp pen. ಬೆಲೆ ಬಹಳ. ಸತ್ಕಾರ್ಯದಲ್ಲೂ ದುಡಿದ ಪೆನ್!

ಶೀಲವೇ ಲೋಕಹಿತವನ್ನು ಸಾಧಿಸುವ ಸಾಧನವು, ಅದಿಲ್ಲದಿದ್ದರೆ ಏನಿದ್ದರೂ ವ್ಯರ್ಥ, ಎಂಬುದು ಪದೇಪದೇ ನನ್ನ ಅನುಭವಕ್ಕೆ ಬರುತ್ತಲಿದೆ. ಶೀಲವನ್ನು ಗಳಿಸಲು ಯತ್ನಿಸುವುದೇ ಮಾನವನ ಪರಮ ಕರ್ತವ್ಯವು. ಶೀಲವು ಸತ್ಯದ ದಿವ್ಯ ರೂಪವು. ಶ್ರೀಹರಿ, ನನ್ನ ಹೃದಯವು ಬೇಡುತ್ತಿದ್ದುದನ್ನು ನೀನು ಬಲ್ಲೆ. ಕೃಪೆದೋರು, ಹೃದಯದ ಪ್ರಾರ್ಥನೆಯನ್ನು ಪೂರ್ಣಗೊಳಿಸು, ತಂದೆ!

**28-10-41 ರಾತ್ರಿ 8.35**

ಇಂದು ಜಲಶಿಲ್ಪಿ ಬಂದಿದ್ದರು. ಈಗ ತೋಡಿಸುತ್ತಿರುವ ಬಾವಿಯನ್ನೆ ಮುಂದೆ ತೋಡಿಸಬೇಕೆಂದು ಅವರ ಅಭಿಪ್ರಾಯವು. 60 ಫೂಟಿಗೆ ಕಲ್ಲು ಬರುವುದಂತೆ. ಮುಂದೆ 12 ಫೂಟಿಗೆ ನೀರು ಬರುವುದಂತೆ. ಜಲವು ವಿಪುಲವಾಗಿ ಬರುವುದಂತೆ ಮತ್ತು ಬಾವಿಗೆ ಯಾವ ಬಗೆಯ ಅಪಾಯವೂ ಇಲ್ಲವಂತೆ.

ಪೆನ್ ದೊರೆತಿತು! ಶ್ರೀನಿವಾಸನ ಪುಸ್ತಕಕ್ಕೆ ಯಾರೊ ಅದನ್ನು ಕೂಡಿಸಿದ್ದರು. ಮುಂದಿನ ಶುಭದ ಚಿಹ್ನವು



ಸಾಲಿ ರಾಮಚಂದ್ರರಾಯರು

ಇದೆಂದು ಭಾವಿಸುತ್ತೇನೆ. ಶ್ರೀಹರಿ, ಈ ಪೆನ್ನಿನಿಂದ ತಾಯ್ನುಡಿಯ, ತಾಯ್ನಾಡಿನ, ನಿನ್ನ ಸೇವೆ ಆಗಲಿ. ಹೆಚ್ಚು ಹೆಚ್ಚು ಆಗಲಿ! ನಿನ್ನ ಸೇವೆಗೆ ಬಾರದ ವಸ್ತುವಿನಿಂದೇನು? ಸ್ವಾಮಿ, ನನ್ನ ಪೆನ್ ನಿನ್ನ ಸೇವೆಗೆ ಸಲ್ಲಲಿ!

**30-10-41 ರಾತ್ರಿ 8.35**

ಬಾವಿ ತೋಡಿಸಲು ಮತ್ತೆ ಇಂದು ಪ್ರಾರಂಭ. ಇಟ್ಟಿಗೆಗಳನ್ನು ಮಾಡಲು ಆರಂಭಿಸಿರುವರು.

ನಿನ್ನೆ ರಾತ್ರಿ ಗೋಠೆ ಜಯರಾಮಾಚಾರ್ಯರೂ ನಾಯಿಕ ಗಣೇಶರಾಯರೂ ಅವರ ಮನೆಯವರೂ ಊಟಕ್ಕೆ ಆಮಂತ್ರಿತರಾಗಿದ್ದರು ನನ್ನಲ್ಲಿ.

ಕರ್ತವ್ಯವನ್ನು ಮಾಡಲು ಬೇಸರು ಬರಕೂಡದು. ಕರ್ತವ್ಯವಲ್ಲದ ಅನೇಕ ಕೆಲಸಗಳಲ್ಲಿ ಮನುಷ್ಯನ ಬಲವು ಮತ್ತು ಉತ್ಸಾಹವು ವ್ಯಯವಾಗುವುವು.

**31-10-41 ರಾತ್ರಿ 9.25**

ಬಾವಿಯ ಕೆಲಸವು ಮುಂದೆ ಸಾಗಿದೆ. ಜಲಶಿಲ್ಪಿ ಶ್ರೀ. ನರಸಿಂಹಾಚಾರ್ಯರ ಮಾತು ಸತ್ಯವಾಗುವ ಲಕ್ಷಣವು ತೋರುತ್ತದೆ. ಪುಡಿಮಣ್ಣು ಹೋಗಿ ಗಟ್ಟಿಗಲ್ಲಿನ ತರವು ಬರುವುದೆಂಬಂತೆ ತೋರುತ್ತಿದೆ. ಶ್ರೀಹರಿ,